ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣ–ತುಂಗ ಆವರಣ, ಮಂತ್ರಾಲಯ ರಸ್ತೆ, ಯರಗೇರಾ–584133, ರಾಯಚೂರು, ಕರ್ನಾಟಕ

www.raichuruniversity.ac.in ಆಡಳಿತ ವಿಭಾಗ

No.RUR/BOA/RCT/ADVT/02 DATE: 16.08.2024

# ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿ ಅಧಿಸೂಚನೆ

ಉಲ್ಲೇಖ:
1. ಸರ್ಕಾರದ ಪತ್ರ/ ಆದೇಶ ಸಂಖ್ಯೆ: ಇಡಿ 31 ಯುಜಿವಿ 2024 ದಿನಾಂಕ: 27.06.2024
2. ಸಿಆಸು ಇಲಾಖೆಯ ಟಿಪ್ಪಣಿ ಸಂಖ್ಯೆ:ಸಿಆಸುಇ 43 ಹೈಕಉ 2022, ದಿನಾಂಕ: 26.09.2022
3. ಇಡಿ 86 ಯುಜಿವಿ 2022 ದಿನಾಂಕ: 29.03.2023
4. RUR/ADM/371 (J)/2023-24/86, dated: 17.04.2023
5. ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ 343 ವೆಚ್ಚ –8/2023, ದಿನಾಂಕ: 10.11.2023.
6. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ದಿನಾಂಕ: 29.02.2024
7. ಸರ್ಕಾರದ ಪತ್ರ / ಆದೇಶ ಸಂಖ್ಯೆ: ಇಡಿ 136 ಯುಎನ್ಇ 2017, ದಿನಾಂಕ: 03.06.2019
8. ಸರ್ಕಾರದ ಪತ್ರ ಸಂಖ್ಯೆ: ಇಡಿ 1 ಯುಜಿಎಸ್ 2022, ದಿನಾಂಕ: 09.11.2023
9. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 02 ಬಿಇಎಂ 2021, ದಿನಾಂಕ: 24.11.2021
10. ಸಿಂಡಿಕೇಟ್ ಐಟಂ ಸಂ: 06 ದಿನಾಂಕ: 23.12.2023
11. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.08.2024

*****

ಅರ್ಹ ಭಾರತೀಯ ನಾಗರೀಕರಿಂದ ರಾಯಚೂರು ವಿಶ್ವವಿದ್ಯಾಲಯದ, ಸ್ನಾತಕೋತ್ತರ ವಿಭಾಗಗಳಲ್ಲಿ ಖಾಲಿ ಇರುವ 24 ಖಾಯಂ ಸಹಾಯಕ–ಪ್ರಾಧ್ಯಾಪಕರ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ನೇಮಕಾತಿ ಮಾಡಿಕೊಳ್ಳಲು ನಿಗದಿತ ನಮೂನೆಯಲ್ಲಿ 08 (ಎಂಟು) ಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಪ್ರವೇಶಾತಿ ಪರೀಕ್ಷೆಯಲ್ಲಿ ಪರೀಕ್ಷೆಯನ್ನು ಬರೆಯುವಂತಹ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.**[1]

ಅರ್ಜಿಯ ನಮೂನೆ ಹಾಗೂ ಶೈಕ್ಷಣಿಕ, ಇತರೇ ಅರ್ಹತೆಗಳ ವಿವರಗಳನ್ನು ರಾಯಚೂರು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಿಂದ (https://raichuruniversity.ac.in) ಪಡೆಯಬಹುದಾಗಿದೆ. (ವಿಶ್ವವಿದ್ಯಾಲಯವು ಯಾವುದೇ ರೀತಿಯ ಮುದ್ರಿತ ಅರ್ಜಿಗಳನ್ನು ವಿತರಿಸುವುದಿಲ್ಲ) ಅರ್ಜಿಗಳನ್ನು 08 ಪ್ರತಿಗಳಲ್ಲಿ ನಿಗದಿತ ಶುಲ್ಕವನ್ನು[2] ಭರಿಸಿದ ರಶೀದಿಯೊಂದಿಗೆ ಸ್ವಯಂ ದೃಡೀಕರಿಸಿದ ಪ್ರಮಾಣ ಪತ್ರಗಳು ಮತ್ತು ಪ್ರಶಂಸಾ ಪತ್ರಗಳೊಂದಿಗೆ ಲಕೋಟೆಯ ಮೇಲೆ **ಸಹಾಯಕ ಪ್ರಾಧ್ಯಾಪಕರ ಹುದ್ದೆಗಾಗಿ __________ ವಿಭಾಗಕ್ಕಾಗಿ** ಅರ್ಜಿ ಎಂದು ನಮೂದಿಸಿ **"ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ಕೃಷ್ಣತುಂಗಾ ಆವರಣ, ಮಂತ್ರಾಲಯ ರಸ್ತೆ, ಯರಗೇರ – 584 133, ಜಿ: ರಾಯಚೂರು"** ಇವರಿಗೆ ಭಾರತೀಯ ಅಂಚೆಯ ಮೂಲಕ ಮಾತ್ರ[3] ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 17.09.2024** (ನಿಗದಿತ ಸಮಯದಲ್ಲಿ ಅರ್ಜಿಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಕೆಯಾಗಬೇಕು, ಯಾವುದೇ ರೀತಿಯ/ ಅಂಚೆ ಸೇರಿದಂತೆ ವಿಳಂಬಕ್ಕೆ ವಿಶ್ವವಿದ್ಯಾಲಯವು ಹೊಣೆಗಾರವಾಗುವುದಿಲ್ಲ) ಅಥವಾ ಅಭ್ಯರ್ಥಿಗಳು ರಾಯಚೂರು ವಿಶ್ವವಿದ್ಯಾಲಯದ ಆವಕ ವಿಭಾಗದಲ್ಲಿ ಖುದ್ದಾಗಿ ಅರ್ಜಿಗಳನ್ನು **ದಿನಾಂಕ: 17.09.2024 ಸಾಯಂಕಾಲ 05.30 ರೊಳಗಾಗಿ** ಸಲ್ಲಿಸಬಹುದಾಗಿರುತ್ತದೆ.

---

[1] ಇಡಿ/ಕೆಇಎ/ಆಡಳಿತ/ಸಿ.ಆರ್–07/2024–25(ಕೆಕೆ)(371–ಜೆ) ದಿನಾಂಕ: 31.07.2024

ಇಡಿ/ಕೆಇಎ/ಆಡಳಿತ/ಸಿ.ಆರ್–07/2024–25(ಕೆಕೆ)(371–ಜೆ) ದಿನಾಂಕ: 31.07.2024

https://cetonline.karnataka.gov.in/kea/raichur2024

[2] ನಿಗದಿತ ಅರ್ಜಿ ಶುಲ್ಕ :

ರೂ. 1,000=00 ಸಾಮಾನ್ಯ ಅಭ್ಯರ್ಥಿಗಳಿಗೆ ಹಾಗೂ ರೂ. 500=00 ಎಸ್‌ಸಿ/ಎಸ್‌ಟಿ/ಪ್ರವರ್ಗ–1/ಪಿಡಬ್ಲೂಡಿ ಅಭ್ಯರ್ಥಿಗಳಿಗೆ

[3] ಖಾಸಗೀ ಕೋರಿಯರ್ ಸೇವೆಗಳು ವಿಶ್ವವಿದ್ಯಾಲಯವಿರುವ ಸ್ಥಳಕ್ಕೆ ಲಭ್ಯವಿರುವುದಿಲ್ಲ.

ಸಹಾಯಕ-ಪ್ರಾಧ್ಯಾಪಕ ನೇಮಕಾತಿಗೆ ಹೊರಡಿಸಿರುವ ಮಾಹಿತಿ ಕೈಪಿಡಿಯು ನೇಮಕಾತಿ ಅಧಿಸೂಚನೆಯ ಭಾಗವಾಗಿದ್ದು, ನೇಮಕಾತಿಗೆ ಬೇಕಾಗಿರುವ ಅರ್ಹತೆ, ಮೀಸಲಾತಿ, ನೇಮಕಾತಿ ವಿಧಾನ ಎಲ್ಲವನ್ನು ಒಳಗೊಂಡಿರುತ್ತದೆ. ಕಾರಣ ಅರ್ಜಿದಾರರು ನೇಮಕಾತಿ ಮಾಹಿತಿ ಕೈಪಿಡಿಯನ್ನು ಕೂಲಂಕುಷವಾಗಿ ಓದಿಕೊಂಡು ಅರ್ಜಿ ಸಲ್ಲಿಸಬೇಕೆಂದು ಸೂಚಿಸಲಾಗಿದೆ.

**ಹುದ್ದೆ : ಸಹಾಯಕ ಪ್ರಾಧ್ಯಾಪಕರು (24)**

**371(ಜೆ) ಹುದ್ದೆಗಳು : 18**

ಕಲ್ಯಾಣ ಕರ್ನಾಟಕ 371(ಜೆ) ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿರುವ ಹದಿನೆಂಟು (18) ಹುದ್ದೆಗಳ ವಿವರ.

| **ಕ್ರ. ಸಂ.** | **ವಿಷಯ** | **ಹುದ್ದೆಗಳ ವಿವರ** |
|---|---|---|
| 01 | ರಸಾಯನಶಾಸ್ತ್ರ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 02 | ಅರ್ಥಶಾಸ್ತ್ರ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 03 | ಇಂಗ್ಲೀಷ್ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 04 | ಇತಿಹಾಸ ಮತ್ತು ಪುರಾತತ್ವಶಾಸ್ತ್ರ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 05 | ಗಣಿತ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 06 | ಭೌತಶಾಸ್ತ್ರ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 07 | ರಾಜ್ಯಶಾಸ್ತ್ರ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 08 | ಸಮಾಜಕಾರ್ಯ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| 09 | ಸಮಾಜಶಾಸ್ತ್ರ | 01 (ಎಸ್‌ಸಿ–ಇತರೆ) ಮತ್ತು 01 (ಜಿಎಂ–ಇತರೆ) |
| | **ಒಟ್ಟು** | **09 (ಎಸ್‌ಸಿ–ಇತರೆ) ಮತ್ತು 09 (ಜಿಎಂ–ಇತರೆ) = 18 ಹುದ್ದೆಗಳು** |

ಮಿಕ್ಕುಳಿದ ವೃಂದದ ಹುದ್ದೆಗಳು (**Non 371(J)) : 06**

ಮಿಕ್ಕುಳಿದ ವೃಂದದ ಆರು (6) ಹುದ್ದೆಗಳ ವಿವರ (ಈ ಹುದ್ದೆಗಳಿಗೆ ಎಲ್ಲಾ ವರ್ಗದ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಬಹುದು)

| **ಕ್ರ. ಸಂ.** | **ವಿಷಯ** | **ಹುದ್ದೆಗಳ ವಿವರ (Non 371(J))** |
|---|---|---|
| 01 | ಸಸ್ಯಶಾಸ್ತ್ರ | 01 (ಜಿಎಂ–ಇತರೆ) |
| 02 | ವಾಣಿಜ್ಯ | 01 (ಜಿಎಂ–ಇತರೆ) |
| 03 | ಕಂಪ್ಯೂಟರ್ ಸೈನ್ಸ್ ಆಂಡ್ ಅಪ್ಲಿಕೇಶನ್ | 01 (ಜಿಎಂ–ಇತರೆ) |
| 04 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 01 (ಜಿಎಂ–ಇತರೆ) |
| 05 | ಸೂಕ್ಷ್ಮಜೀವಶಾಸ್ತ್ರ | 01 (ಜಿಎಂ–ಇತರೆ) |
| 06 | ಪ್ರಾಣಿಶಾಸ್ತ್ರ | 01 (ಜಿಎಂ–ಇತರೆ) |
| | **ಒಟ್ಟು** | **06 (ಜಿಎಂ–ಇತರೆ)** |

ವೇತನ ವಿವರ

| **ಕ್ರ. ಸಂ.** | **ಹುದ್ದೆ** | **ಲೇವಲ್** | **ಮೂಲ ವೇತನ** |
|---|---|---|---|
| 01 | ಸಹಾಯಕ ಪ್ರಾಧ್ಯಾಪಕ | ಲೇವಲ್ – 10 | ರೂ. 57,700 – 1,82,400 |

ಕಲ್ಯಾಣ ಕರ್ನಾಟಕ ಕೋಟಾದಲ್ಲಿ 371(ಜೆ) ಅಡಿಯಲ್ಲಿ ವರ್ಗೀಕರಿಸಲ್ಪಟ್ಟ ಹುದ್ದೆಗಳಿಗೆ 371(ಜೆ) ಅರ್ಹತಾ (ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು, 2013) ಪ್ರಮಾಣ ಪತ್ರ ಹೊಂದಿದ ಅಭ್ಯರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಲು ಅರ್ಹರಿರುತ್ತಾರೆ. ಮಿಕ್ಕುಳಿತ ವೃಂದ (371(ಜೆ) ಹೊರತುಪಡಿಸಿ) ವರ್ಗೀಕರಿಸಿರುವ ಹುದ್ದೆಗಳಿಗೆ ಎಲ್ಲಾ ಪ್ರದೇಶ/ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಮುಂದುವರೆದು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳಿಗೆ (ಎಸ್‌ಸಿ/ಎಸ್‌ಟಿ) ಮೀಸಲಿರುವಂತಹ ಹುದ್ದೆಗಳಿಗೆ ಬೇರೆ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಇತರೇ ಹುದ್ದೆ ಎಂದು ವರ್ಗೀಕರಿಸಿದ ಹುದ್ದೆಗಳಿಗೆ ವರ್ಗೀಕರಣಗೊಂಡಿರುವ ವರ್ಗಗಳಲ್ಲಿ ಆ ವರ್ಗಕ್ಕೆ ಸೇರಿದ (ಜಿಎಂ) ಹೊರತುಪಡಿಸಿ ಎಲ್ಲಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹಾಗೂ ಜಿಎಂ (ಇತರೇ) ಎಂದು ವರ್ಗೀಕರಣಗೊಂಡ ಹುದ್ದೆಗಳಿಗೆ ಎಲ್ಲಾ ವರ್ಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೊರರಾಜ್ಯದ ಅಭ್ಯರ್ಥಿಗಳು ಮೀಸಲಾತಿ ಪಡೆಯಲು ಅರ್ಹರಲ್ಲ.

**ಕುಲಸಚಿವರು**

ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

Copy fwcs for information to:

1. The Speical Secretary to Governor, Raj Bhavan, Bangalore – 560 001.
2. The Secretary, University Grants Commission, Bahadru Shah Zafar Marg, New Delhi- 110 002.
3. The Prinicipal Secretary to Government, Department of Higher Educations, M.S.Building, Dr. B.R.Ambedkar Road, Bangalore – 560 001.
4. The Secretary, Association of Indian Universit, Agv. House, 16, Kotla Marg, New Delhi – 110 002.
5. The Commissioner, Social Welfare Department, 5th floor, M.S.Building, Bangalore – 560 001.
6. The Commissioner, Backward classes welfare department, No 16D, Devaraj urs Bhavan, 3rd floor, Milers Tankbad Area, Vasanthnagar, Bangalore – 560 052.
7. The Joint Secretary, DPAR Hyderabad Karnataka Cell, Govt. of Karnataka, Bangalore.
8. All the Registrars, Indian Institute of Technology, including Indian Institute of Science, Bangalore.
9. Joint Director of Collegiate Education, Kalaburagi.
10. The Finance Officer, RUR
11. The Chairman's / Directores of all the PG Deparment of Studies, RUR
12. The Dean student welfate, RUR
13. The Director, College Development Council, RUR
14. The Librarian, RUR
15. The Deputy Registrar, RUR

Copy to :

1. P.S. to Vice-Chancellor, RUR
2. P.A. to Registrar, RUR
3. P.A. to Registrar (Evaluation), RUR
4. Office copy.

*****